ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳನ್ನು ಅಕ್ರಮವಾಗಿ ಸಾಗಿಸುತ್ತಿರುವುದರ ಬಗ್ಗೆ,

೨೫೯ ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ ಗಣಿ ಮತ್ತು ಭೂವಿಜ್ಞಾನ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದರೆ ಅವುಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ ಗಣಿ ಮಂತ್ತು ಭೂವಿಜ್ಞಾನ ಸಚಿವರು)—

ಅ) ಬಂದಿದೆ.

ಆ) ಖಾಸಗಿ ಜಮೀನಿನಲ್ಲಿ ಗ್ರಾನೈಟ್ ತೆಗೆಯುವುದಕ್ಕೆ ರಾಜ್ಯ ಉಚ್ಚನ್ಯಾಯಾಲಯದ ತೀರ್ಪಿನ ಮೂಲಕ ಖಾಸಗಿ ಜಮೀನಿನ ಮಾಲೀಕರು ಮತ್ತು ಗಣಿ ಮಾಲೀಕರು ಗ್ರಾನೈಟ್ ಶಿಲೆಯನ್ನು ಹೊರ ತೆಗೆಯುತ್ತಿದ್ದಾರೆ. ಈ ಆದೇಶದ ವಿರುದ್ಧ ರಾಜ್ಯ ಸರ್ಕಾರವು ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದೆ. ಮೇಲ್ಮನವಿಯಲ್ಲಿರುವ ತೀರ್ಪಿಗಾಗಿ ಕಾಯಲಾಗುತ್ತಿದೆ. ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಗ್ರಾನೈಟ್ ಶಿಲೆಗಳನ್ನು ತೆಗೆಯುತ್ತಿರುವವರ ವಿರುದ್ಧ ಕಾನೂನಿನ ಪ್ರಕಾರ ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ.

ದಾವಣಗೆರೆ ಮತ್ತು ಚಿತ್ರದುರ್ಗ ಡಿಪೋಗಳಲ್ಲಿ ಬಸ್ಸುಗಳ ಕೊರತೆ

೨೬೦ ಶ್ರೀ ಕೆ. ಶಿವಮೂರ್ತಿ (ಭರಮಸಾಗರ)—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆ ಮತ್ತು ಚಿತ್ರದುರ್ಗ ಡಿಪೋಗಳಲ್ಲಿ ಬಸ್ಸುಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಮೇಲೆ ತಿಳಿಸಿದ ಪ್ರತಿಯೊಂದು ಡಿಪೋಗಳಲ್ಲಿ ಎಷ್ಟು ಬಸ್ಸುಗಳ ಕೊರತೆ ಇದೆ ಹಾಗೂ ಕೊರತೆ ಇರುವ ಸಿಬ್ಬಂದಿಯ ಸಂಖ್ಯೆ ಎಷ್ಟು

ಇ) ಈ ಕೊರತೆಯನ್ನು ನಿವಾರಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಗಳು)—

ಅ) ಚಿತ್ರದುರ್ಗ ಮತ್ತು ದಾವಣಗೆರೆ ಘಟಕಗಳಲ್ಲಿ ವಾಹನಗಳ ಕೊರತೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ, ಈ ಘಟಕಗಳಲ್ಲಿ ತಾಂತ್ರಿಕ ಸಿಬ್ಬಂದಿ ಕೊರತೆ ಈ ಕೆಳಕಂಡಂತಿದೆ

ಚಿತ್ರದುರ್ಗ—೬

ದಾವಣಗೆರೆ—೨೬

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ತುಮಕೂರಿನಿಂದ ಬೆಂಗಳೂರಿಗೆ ನಾನ್ ಸ್ಟಾಪ್ ಬಸ್ಸುಗಳ ಬಗ್ಗೆ

೨೬೨. ಶ್ರೀ ಬಿ. ಎಸ್. ಶಿವನಂಜಪ್ಪ (ತುಮಕೂರು)—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರಿನಿಂದ ಬೆಂಗಳೂರಿಗೆ ಪ್ರಯಾಣ ಮಾಡಲು ಪ್ರಯಾಣಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಅರ್ಧ ಗಂಟೆಗೆ ಒಂದರಂತೆ ಬಸ್ಸುಗಳನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ಸಚಿವರು).—

ಅ) ಇಲ್ಲ

ಆ) ಬೆಂಗಳೂರು ತುಮಕೂರು ನಡುವೆ ಪ್ರತ್ಯೇಕವಾಗಿ ೨೪ ನಿಮಿಷಗಳಿಗೊಂದರಂತೆ ಬಸ್ ಸೌಲಭ್ಯವನ್ನು ಕಲ್ಪಿಸಲಾಗಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಮಾನ್ಯತೆ ಪಡೆದ ನೌಕರ ಸಂಘಗಳ ಬಗ್ಗೆ

೨೪೦. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಯಾವ ಯಾವ ನೌಕರ ಸಂಘಗಳಿಗೆ ರಾಜ್ಯ ಮಟ್ಟದಲ್ಲಿ ಹಾಗೂ ವಿಭಾಗ ಮಟ್ಟದಲ್ಲಿ ಮಾನ್ಯತೆ ನೀಡಲಾಗಿದೆ.

ಆ) ಮತ್ತೆಯಾವುದಾದರೂ ಸಂಘಗಳಿಗೆ ಮಾನ್ಯತೆ ಕೊಡುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರಿಕರ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ರಾಜ್ಯಮಟ್ಟದಲ್ಲಿ ಕೆ.ಎಸ್.ಆರ್.ಟಿ.ಸಿ. ಸ್ಟಾಫ್ಸ್ ಅಂಡ್ ವರ್ಕರ್ಸ್ ಫೆಡರೇಷನ್ನಿಗೆ ಮಾನ್ಯತೆ ನೀಡಲಾಗಿದ್ದು ೧೧ ವಿಭಾಗಗಳಲ್ಲಿ ಇದಕ್ಕೆ ಸಮ್ಮಿಳಿತಗೊಂಡಿರುವ ನೌಕರರ ಸಂಘಗಳಿಗೂ ೩ ವಿಭಾಗಗಳಲ್ಲಿ ಕೆ.ಎಸ್.ಆರ್.ಟಿ.ಸಿ. ಎಂಪ್ಲಾಯೀಸ್ ಫೆಡರೇಷನ್‌ಗೆ ಸಮ್ಮಿಳಿತಗೊಂಡಿರುವ ನೌಕರರ ಸಂಘಗಳಿಗೂ ಉಳಿದ ೩ ವಿಭಾಗಗಳಲ್ಲಿ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಕ್ಕೆ ಸಮ್ಮಿಳಿತಗೊಂಡಿರುವ ನೌಕರರ ಸಂಘಗಳಿಗೂ ಮಾನ್ಯತೆ ನೀಡಲಾಗಿರುತ್ತದೆ.

ಆ) ಇಲ್ಲ

ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ಕಳ್ಳ ಸಾಗಾಣಿಕೆಯು ಮೌಲ್ಯ

೨೪೩. ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕಳೆದ ಮೂರು ವರ್ಷಗಳಲ್ಲಿ ವಿದೇಶಗಳಿಗೆ ರಫ್ತಾಗಿರುವ ಗ್ರಾನೈಟ್ ಕಲ್ಲುಗಳ ಪ್ರಮಾಣ ವೇನು, ಇದರ ಮೌಲ್ಯವೇನು,

ಆ) ರಾಜ್ಯಾದ್ಯಂತ ಎಷ್ಟು ಗಣಿಗಳಲ್ಲಿ ಗ್ರಾನೈಟ್ ಕಲ್ಲುಗಳನ್ನು ತೆಗೆಯಲು ಅನುಮತಿ ಪಡೆದಿದ್ದಾರೆ,

ಇ) ಗ್ರಾನೈಟ್ ಕಲ್ಲುಗಳನ್ನು ತೆಗೆಯುವ ಗಣಿಗಳ ಹತ್ತಿರ, ಕಲ್ಲು ರಫ್ತಾಗುವ ಬಂಗಳೂರಿನ ಬಂದರಿನ ಹತ್ತಿರ ತನಿಖಾ ತಾಣಗಳನ್ನು ನಿರ್ಮಾಣ ಮಾಡಲಾಗಿದೆಯೆ,

ಈ) ಗ್ರಾನೈಟ್ ಕಲ್ಲುಗಳನ್ನು ಎಷ್ಟು ಧಾರ್ಮಿಕ ಕ್ಷೇತ್ರಗಳ ಬೆಟ್ಟಗಳಲ್ಲಿ ತೆಗೆಯುತ್ತಿದ್ದಾರೆ.?

ಶ್ರೀ ಬಿ. ಶಿವಣ್ಣ(ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ ಗಣಿ ಮತ್ತುಭೂವಿಜ್ಞಾನ ಸಚಿವರು).—

ಅ) ೯೭,೬೮೨ ಘನ ಮೀಟರುಗಳು. ರೂ. ೩೫.೩೫ ಕೋಟಿಗಳು.

ಆ) ಒಟ್ಟು ೯೦ ಗಣಿಗಳು.

ಇ) ಮಂಗಳೂರು ಬಂದರಿನ ಹತ್ತಿರ ಮಾತ್ರ ಎರಡು ತನಿಖಾ ತಾಣಗಳನ್ನು ಸ್ಥಾಪಿಸಿದೆ.

ಈ) ಯಾವುದೂ ಇಲ್ಲ.